## ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿ.ಸಿ. ನಂ. 211/2024**

| | | |
|---|---|---|
| **ಆರೋಪಿ ಹೆಸರು** | ಃ | ಉಮೇಶ |
| **ತಂದೆಯ ಹೆಸರು** | ಃ | ವೀರಭದ್ರಪ್ಪ ಕಳ್ಳಿಮನಿ |
| **ವಯಸ್ಸು** | ಃ | 38 |
| **ವಾಸಸ್ಥಳ** | ಃ | ವಿಟ್ಟಲಾಪುರ ತಾಃ ಕುಂದಗೋಳ |

## ಅಪರಾಧ ದಂಡಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಬರೆದುಕೊಂಡ ಆರೋಪಿತನ ಹೇಳಿಕೆ

**ಪ್ರಶ್ನೆ 1ಃ** **ಅಭಿಯೋಜಕರು ಸಾದರಪಡಿಸಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿರುವಿಯೊ?**

**ಉತ್ತರ ಃ**

**ಪ್ರಶ್ನೆ 2:** **ಪ್ರಾಸಾ-1/ಚಾಸಾ-1** ತುಕಾರಾಮ ಕಾಸರ ಇವರು **ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ** ದಿನಾಂಕ 06.10.2022 ರಂದು ನಾನು ದ್ಯಾವನಕೊಂಡ ಗ್ರಾಮದಲ್ಲಿ ಕಬ್ಬು ಕಡೆಯಲು ಹೋಗಿದ್ದಾಗ ಸಾಯಂಕಾಲ 6-30 ಗಂಟೆ ಸುಮಾರಿಗೆ ಚಾಸಾ-6 ರವರು ನನಗೆ ಪೋನ ಕರೆ ಮಾಡಿ ಹುಬ್ಬಳ್ಳಿ ಕಾರವಾರ ರಸ್ತೆಯಲ್ಲಿ ಜೈ ಹಿಂದ ಡಾಬಾ ಹತ್ತಿರ ನಮ್ಮ ತಂದೆಗೆ ಅಪಘಾತವಾಗಿದೆ ಎಂದು ಮಾಹಿತಿ ನೀಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ 3:** ಇವರು ಮುಂದುವರಿದು ನಾನು ಸುದ್ದಿ ತಿಳಿದು ಚಾಸಾ-7 ರವರ ಜೊತೆಗೆ ಕಲಘಟಗಿ ಸಮೀಪದ ಜೈ ಹಿಂದ ಡಾಬಾ ಹತ್ತಿರ ಬಂದು ನೋಡಿದಾಗ ನಮ್ಮ ತಂದೆ ರಸ್ತೆ ಮೇಲೆ ಬಿದ್ದಿದ್ದರು. ನಾನು ಚಾಸಾ-6 ರವರನ್ನು ವಿಚಾರಿಸಿದಾಗ ಕಾರ ಚಾಲಕ ಲಾರಿ ಓವರ ಟೇಕ್ ಮಾಡಿ ಬಂದು ನಮ್ಮ ತಂದೆ ಕಲಘಟಗಿಯಿಂದ ಜುಂಜನಬೈಲಿಗೆ ಟಿ ವಿ ಎಸ್ ಎಕ್ಸಲ ಲೂನಾ ವಾಹನದಲ್ಲಿ ಹೋಗುವಾಗ ಡಿಕ್ಕಿ ಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ. ನಮ್ಮ ತಂದೆ ಕಾರಿನ ಗಾಜಿನ ಮೇಲೆ ಬಿದ್ದು ನಂತರ ಕೆಳಗೆ ಬಿದ್ದಿರುತ್ತಾರೆ ಎಂದು ತಿಳಿಸಿರುತ್ತಾರೆ. ಕಾರವಾರ ಕಡೆಯಿಂದ ಹುಬ್ಬಳ್ಳಿ ಕಡೆಗೆ ಬರುತ್ತಿದ್ದ ಕಾರು ವೇಗವಾಗಿ ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದೆ ಎಂದು ತಿಳಿಸಿರುತ್ತಾರೆಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ 4:** ಪ್ರಸಾ-1 ರವರು ಮುಂದುವರಿದು ನಮ್ಮ ತಂದೆ ಅಪಘಾತದಲ್ಲಿ ಗಾಯಗಳಿಗಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಂತರ ಪೋಲೀಸರು ಸ್ಥಳಕ್ಕೆ ಬಂದಿದ್ದರು. ನಾವು ಒಂದು ಖಾಸಗಿ ವಾಹನದಲ್ಲಿ ನಮ್ಮ ತಂದೆಯ ಶವವನ್ನು ಕಲಘಟಗಿ ಸರಕಾರಿ ಆಸ್ಪತ್ರೆಗೆ ಸಾಗಿಸಿರುತ್ತೇವೆ. ಅಪಘಾತದಲ್ಲಿ ನಮ್ಮ ತಂದೆ ತಲೆ, ಕೈ ಕಾಲುಗಳಿಗೆ ಗಾಯಗಳಾಗಿದ್ದವು. ಮರುದಿನ ಪೋಲೀಸರು ಅಪಘಾತವಾದ

ಸ್ಥಳಕ್ಕೆ ಪಂಚನಾಮೆ ಸಲುವಾಗಿ ಕರೆಸಿದ್ದು ನನ್ನೊಂದಿಗೆ ಚಾಸಾ-4 ಮತ್ತು 5 ರವರು ಹಾಜರಿದ್ದರು. ನಾನು ತೋರಿಸಿದ ಸ್ಥಳದಲ್ಲಿ ಪೋಲೀಸರು ಪಂಚನಾಮೆ ಜರುಗಿಸಿರುತ್ತಾರೆ. ಪಂಚನಾಮೆ ಸಮಯದಲ್ಲಿ ಸ್ಥಳದಲ್ಲಿ ಹಾತ ನಾಕಶೆ ತಯಾರಿಸಿದ್ದು ಅದಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಅದೇ ದಿನ ಪೋಲೀಸ ಠಾಣೆಯಲ್ಲಿ ಅಪಘಾತದಲ್ಲಿ ಬಾಗಿಯಾದ ವಾಹನಗಳ ಪಂಚನಾಮೆ ಜರುಗಿಸಿರುತ್ತಾರೆ. ನಮಗೆ ಸೇರಿದ ಒಂದು ಎಕ್ಸಲ್ ವಾಹನ ಆರೋಪಿಗೆ ಸೇರಿದ ಕಾರ ಇವುಗಳ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆ ಜರುಗಿಸಿಸುವಾಗಿ ಚಾಸಾ-4 ಮತ್ತು 5 ರವರು ಹಾಜರಿದ್ದರು. ಆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ** 5: ಪ್ರಾಸಾ-2/ಚಾಸಾ-2 ಮಾರುತಿ ಗೌಡರ ಇವರು **ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ** ಸುಮಾರು 2 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ನಾರಾಯಣ ಇವರು ಮೃತಪಟ್ಟಿರುತ್ತಾರೆ. ಪೋಲೀಸ ಠಾಣೆಯಲ್ಲಿ ಈಗ ತೋರಿಸಲಾದ ಶವ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆ ಮಾಡುವಾಗ ನನ್ನೊಂದಿಗೆ ಚಾಸಾ-1 ಹಾಗೂ 3 ರವರು ಹಾಜರಿದ್ದರು. ಪಂಚನಾಮೆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರ:

**ಪ್ರಶ್ನೆ** 6: ಪ್ರಾಸಾ-3/ಚಾಸಾ-3 ಜೈಲಾನಿ ಅಂಗಡಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ 2022 ರಲ್ಲಿ ರಸ್ತೆ ಅಪಘಾತದಲ್ಲಿ ನಾರಾಯಣ ಇವರು ಮೃತಪಟ್ಟಿರುತ್ತಾರೆ. ನಾನು ಅವರ ಶವ ನೋಡಲು ಕಲಘಟಗಿ ಸರಕಾರಿ ಆಸ್ಪತ್ರೆಗೆ ಹೋದಾಗ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆ ಮಾಡುವಾಗ ನನ್ನೊಂದಿಗೆ ಚಾಸಾ-1, 2, ಹಾಜರಿದ್ದರು. ಪಂಚನಾಮೆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಪಂಚನಾಮಯನ್ನು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ** 7: ಪ್ರಾಸಾ-4/ಚಾಸಾ-8 ಗೂಳಪ್ಪ ಕಳ್ಳಿಮನಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಸುಮಾರು 2 ವರ್ಷಗಳ ಹಿಂದೆ ನನ್ನ ತಮ್ಮ ಚಾಸಾ-10 ರವರಿಗೆ ಪಾರ್ಶುವಾಯು ಹೊಡೆದಿದ್ದರಿಂದ ಪ್ರಜ್ಞೆ ತಪ್ಪಿದ್ದು ಆತನನ್ನು ಆಸ್ಪತ್ರೆಗೆ ಕೆರದುಕೊಂಡು ಹೋಗುವಾಗ ಅಪಘಾತವಾಗಿರುತ್ತದೆ. ಅಪಘಾತ ಕಲಘಟಗಿ ತಾಲೂಕ ದೇವಿಕೊಪ್ಪ ಗ್ರಾಮದ ಹತ್ತಿರ ಆಗಿರುತ್ತದೆ. ಸದರಿ ಅಪಘಾತ 4-30 ರಿಂದ 5-00 ಗಂಟೆ ಆಗಿರುತ್ತದೆ. ಆ ಸಮಯದಲ್ಲಿ ನಾವು ಕಾರಿನಲ್ಲಿ ಪ್ರಯಾಣಿಸುತ್ತಿದ್ದೆವು. ನಮ್ಮ ವಾಹನವನ್ನು ಉಮೇಶ ಚಲಾಯಿಸುತ್ತಿದ್ದ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ** 8: ಪ್ರಾಸಾ-5/ಚಾಸಾ-9 ಶಿವರುದ್ರಪ್ಪ ಕಳ್ಳಿಮನಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಸುಮಾರು ಒಂದುವರೆ ವರ್ಷಗಳ ಹಿಂದೆ ನನ್ನ ಅಣ್ಣ ಚಾಸಾ-10 ರವರಿಗೆ ಪಾರ್ಶುವಾಯು ಹೊಡೆದಿದ್ದರಿಂದ ಆತನ್ನು ಕಾರವಾರ

ಜಿಲ್ಲೆ ಅಳಗಾ ಗ್ರಾಮಕ್ಕೆ ಆಸ್ಪತ್ರೆಗೆ ಕೆರದುಕೊಂಡು ಹೋಗಿ ಬರುವಾಗ ಅಪಘಾತವಾಗಿರುತ್ತದೆ. ನಾನು, ಚಾಸಾ-8 ಹಾಗೂ ಚಾಸಾ-10 ರವರ ಮಗ ಪ್ರಕಾಶ ಆಸ್ಪತ್ರೆಗೆ ಕಾರಿನಲ್ಲಿ ಹೋಗಿದ್ದೆವು. ಸದರಿ ಕಾರನ್ನು ಆರೋಪಿ ಚಲಾಯಿಸುತ್ತಿದ್ದ. ಹೊತ್ತು ಮುಳಗಿದಾಗ ನಾವು ಬರುತ್ತಿದ್ದಾಗ ಜುಂಜುನಬೈಲದ ಒಬ್ಬ ವ್ಯಕ್ತಿ ಕಾರಿಗೆ ಮೊಟರ ಸೈಕಲನಿಂದ ಡಿಕ್ಕಿ ಪಡಿಸಿರುತ್ತಾನೆ. ನಾವು ಕಾರವಾರದಿಂದ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಗೆ ಹೋಗುತ್ತಿದ್ದೆವು. ಮೋಟರ ಸೈಕಲ ಸವಾರ ಹುಬ್ಬಳ್ಳಿ ಕಡೆಯಿಂದ ಬರುತ್ತಿದ್ದ. ಮೋಟರ ಸೈಕಲ ಸವಾರ ಸ್ಥಳದಲ್ಲಿ ಮೃತಪಟ್ಟಿದ್ದ. ಕಾರಿನಲ್ಲಿ ಮುಂದೆ ಕುಳಿತಿದ್ದ ಚಾಸಾ-8 ರವರ ಮುಖಕ್ಕೆ ಗಾಯಗಳಾಗಿದ್ದವು. ನಮಗೂ ಕೂಡಾ ಸಣ್ಣ ಪುಟ್ಟ ಗಾಯಗಳಾಗಿದ್ದವು. ಪೋಲೀಸರು ನಮ್ಮನ್ನು ಒಂದು ಬಸ್ಸಿನಲ್ಲಿ ಹಾಕಿ ಕಿಮ್ಸ ಹುಬ್ಬಳ್ಳಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೆನು ಹೇಳುವಿರಿ?

ಉತ್ತರಃ

**ಪ್ರಶ್ನೆ 9:** ಪ್ರಾಸಾ-6/ಚಾಸಾ-4 ವಿಜಯಕುಮಾರ ಲಮಾಣಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಸುಮಾರು ಎರಡು ವರ್ಷಗಳ ಹಿಂದೆ ಕೆಲಸದ ನಿಮಿತ್ತ ಪೋಲಿಸ ಠಾಣೆಗೆ ಹೋದಾಗ ಚಾಸಾ-1 ರವರ ತಂದೆ ಮೃತ ಪಟ್ಟ ಬಗ್ಗೆ ಪೋಲಿಸರು ನಿಪಿ-2 ಕ್ಕೆ ನನ್ನ ಸಹಿ ಪಡೆದಿರುತ್ತಾರೆ. ಅದೇ ರೀತಿ ನಿಪಿ-3 ಕ್ಕೆ ಸಹಿ ಪಡೆದುಕೊಂಡಿರುತ್ತಾರೆ. ಅಪಘಾತವಾದ ಸ್ಥಳದಲ್ಲಿ ಪೋಟೊ ತೆಗೆಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೆನು ಹೇಳುವಿರಿ?

ಉತ್ತರಃ

**ಪ್ರಶ್ನೆ 10:** ಪ್ರಾಸಾ-7/ಚಾಸಾ-6 ಮಂಜುನಾಥ ಹರಮಣ್ಣವರ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿನಾಂಕ 06.10.2022 ರಂದು ನಾನು ಕೆಲಸ ಮುಗಿಸಿಕೊಂಡು ನನ್ನ ಹೆಂಡತಿಯನ್ನು ಕರೆದುಕೊಂಡು ಜುಂಜನಬೈಲ ಗ್ರಾಮಕ್ಕೆ ಮೋಟರ ಸೈಕಲ ಮೇಲೆ ಹೋಗುತ್ತಿದ್ದಾಗ ನನ್ನ ಮುಂದೆ ಎದುರುನಿಂದ ಬರುತ್ತಿದ್ದ ಕಾರ ಟಿ ವಿ ಎಸ್ ಎಕ್ಸಲ್ ವಾಹನಕ್ಕೆ ಡಿಕ್ಕಿ ಪಡಿಸಿದ್ದು ಸದರಿ ವಾಹನ ಸವಾರ ಮೇಲೆ ಜಿಗಿದು ಕೆಳಗೆ ಬಿದ್ದಿರುತ್ತಾನೆ. ಎಕ್ಸಲ್ ವಾಹನ ಪಕ್ಕಕ್ಕೆ ಹೋಗಿ ಬಿದ್ದಿರುತ್ತದೆ. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ-1 ರವರ ತಂದೆ ನಾರಾಯಣ ಇದ್ದರು. ನಾರಾಯಣರವರ ತಲೆಗೆ ತೀವ್ರ ತರಹದ ಗಾಯಗಳಾಗಿದ್ದು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಾನು ಅಪಘಾತದ ಸುದ್ದಿಯನ್ನು ಚಾಸಾ-1 ಮತ್ತು 7 ರವರೆಗೆ ಕರೆ ಮಾಡಿ ತಿಳಿಸಿರುತ್ತೇನೆ. ನಂತರ ನನ್ನ ಹೆಂಡತಿಯನ್ನು ಕರೆದುಕೊಂಡು ಮನೆಗೆ ಹೋಗಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೆನು ಹೇಳುವಿರಿ?

ಉತ್ತರಃ

**ಪ್ರಶ್ನೆ 11:** ಪ್ರಾಸಾ-8/ಚಾಸಾ-5 ಸಂತೋಷ ಲಮಾಣಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಸುಮಾರು ಎರಡು ವರ್ಷಗಳ ಹಿಂದೆ ಪಾಸಪೋರ್ಟ ಮಾಡಿಸುವ ಸಲುವಾಗಿ ಪೋಲಿಸ ಠಾಣೆಗೆ ಹೋದಾಗ ಗುನ್ನೆ ಸ್ಥಳದ ಪಂಚನಾಮೆ ಹಾಗೂ ಹಾತ ನಕಾಶೆಗೆ ಪೋಲೀಸರು ನನ್ನ ಸಹಿ ಪಡೆದುಕೊಂಡು ಪೋಟೋ ತೆಗೆದಿರುತ್ತಾರೆ. ನಮ್ಮ ಊರಿನ ತುಕಾರಮ ಇವರ ತಂದಗೆ ಅಪಘಾತವಾದ ಬಗ್ಗೆ ಸಹಿ ಪಡೆದುಕೊಂಡಿರುತ್ತಾರೆ. ನನ್ನ ಜೊತೆ ಸಹಿ ಮಾಡುವಾಗ ಚಾಸಾ-4 ರವರು ಇದ್ದರು. ಪೋಲೀಸ ಠಾಣೆಗೆ ಹೋಗಿದ್ದಾಗ

ನಿಪಿ-6 ರಂತೆ ಪಂಚನಾಮೆಗೆ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ಪೋಟೊ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ 12:** ಪ್ರಾಸಾ-9/ಚಾಸಾ-7 ಚಂಬಣ್ಣ ಕಾಸರ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಸುಮಾರು 2-3 ವರ್ಷಗಳ ಹಿಂದೆ ನಾನು ಕಬ್ಬು ಕಡಿಯುವ ಸಲುವಾಗಿ ಕೆಲಸಕ್ಕೆ ಹೋಗಿದ್ದಾಗ ಚಾಸಾ-6 ರವರು ಸಾಯಂಕಾಲ 6-00 ಗಂಟೆಗೆ ಚಾಸಾ-1 ರವರಿಗೆ ಕರೆ ಮಾಡಿ ನಮ್ಮ ಕಾಕ ನಾರಾಯಣ ಕಾಸರ ಇವರಿಗೆ ಕಲಘಟಗಿಯ ಜೈ ಹಿಂದ ಧಾಬಾ ಹತ್ತಿರ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ 13:** ಇವರು ಮುಂದುವರಿದು ನಾನು ಹಾಗೂ ಚಾಸಾ-1 ರವರು ಸುದ್ದಿ ತಿಳಿದು ಸಾಯಂಕಾಲ 7-00 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಿದಾಗ ನಮ್ಮ ಕಾಕನ ತಲೆಗೆ ಕೈಗಳಿಗೆ ತೀವ್ರತರಹದ ಗಾಯಗಳಾಗಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ನಂತರ ಒಂದು ಟಾಟಾ ಏಸ್ ವಾಹನದಲ್ಲಿ ಕಲಘಟಗಿ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ 14:** ಪ್ರಾಸಾ-10/ಚಾಸಾ-11 ರುಕ್ಮವ್ವ ಕಾಸರ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಸುಮಾರು 4 ವರ್ಷಗಳ ಹಿಂದೆ ನಾನು ಮನೆಯಲ್ಲಿ ಇದ್ದಾಗ ನನ್ನ ಮಗಳು ಅನುಷಾ ಬಂದು ನನ್ನ ಗಂಡನಿಗೆ ಅಪಘಾತವಾಗಿದೆ ಎಂದು ತಿಳಿಸಿರುತ್ತಾಳೆ. ಅಪಘಾತವಾದ ಮರುದಿನ ಶವವನ್ನು ಮನೆಗೆ ತೆಗೆದುಕೊಂಡು ಬಂದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ 15:** ಪ್ರಾಸಾ-11/ಚಾಸಾ-12 ಸೋಮಶೇಖರಯ್ಯ ಚಿಕ್ಕಮಠ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಸುಮಾರು ಒಂದು ವರ್ಷದ ಹಿಂದೆ ಪೋಲೀಸರು ನನಗೆ ನೋಟೀಸ ಕೊಟ್ಟು ನನ್ನನ್ನು ಪೋಲೀಸ ಠಾಣೆಗೆ ಕರೆಯಿಸಿದ್ದು ನನ್ನಿಂದ ಬಾಂಡ್ ಪಡೆದುಕೊಂಡು ನನ್ನ ವಾಹನವನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ 16:** ಪ್ರಾಸಾ-12/ಚಾಸಾ-17 ಸುಭಾಸ ತಿಮ್ಮಾಪುರ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 6-10-2022 ರಂದು ರಾತ್ರಿ 9-15 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಲಿಖಿತ ಹೇಳಿಕೆ ನೀಡಿದ್ದು ಅದರ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಿಃ 7-10-2022 ರಂದು ಕಲಘಟಗಿ ಸರಕಾರಿ ಆಸ್ಪತ್ರೆಗೆ

ಭೇಟಿ ನೀಡಿ ಶವ ಪಂಚನಾಮೆ ಜರುಗಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ** 17: ಪ್ರಾಸಾ-13/ಚಾಸಾ-18 ಶ್ರೀಶೈಲ ಕೌಜಲಗಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿನಾಂಕ 07.10.2022 ರಂದು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-17 ರವರಿಂದ ವಹಿಸಿಕೊಂಡು ಅದೇ ದಿನ ಪಂಚನಾಮೆ ಜರುಗಿಸಿರುತ್ತೇನೆ. ಅದೇ ದಿನ ಅಪಘಾತದಲ್ಲಿ ಬಾಗಿಯಾದ ತಡೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ದಿನಾಂಕ 08.10.2022 ರಂದು ಚಾಸಾ-6, 7 ಮತ್ತು 11 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಂಾಕ 10.10.2022 ರಂದು ಚಾಸಾ-8 ಮತ್ತು 9 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-6, 7 ಮತ್ತು 11 ರವರ ಪುರವಣೆ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿ ನನ್ನ ಮುಂದೆ ಹಾಜರಾಗಿದ್ದು ಆತನನ್ನು ದಸ್ತಗಿರಿ ಮಾಡಿ ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ** 18: ಇವರು ಮುಂದುವರಿದು ದಿನಾಂಕ 11.10.2022 ರಂದು ಚಾಸಾ-12 ರವರಿಂದ ಬಾಂಡ್ ಪಡೆದುಕೊಂಡು ವಾಹನವನ್ನು ಬಿಟ್ಟುಕೊಟ್ಟಿರುತ್ತೇನೆ. ದಿನಾಂಕ 19.10.2022 ರಂದು ಚಾಸಾ-10 ರವರು ಠಾಣೆಗೆ ಹಾಜರಾಗಿ ಹೇಳಿಕೆ ನೀಡಿರುತ್ತಾರೆ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

**ಪ್ರಶ್ನೆ** 19: **ಈ ಪ್ರಕರಣದಲ್ಲಿ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯೊ?**

**ಉತ್ತರಃ**

**ಪ್ರಶ್ನೆ** 20: **ಈ ಪ್ರಕರಣದಲ್ಲಿ ನಿಮ್ಮಪರವಾಗಿ ಸಾಕ್ಷಿದಾರರ ವಿಚಾರಣೆ ಮಾಡಿಸುವಿರಾ?**

**ಉತ್ತರಃ**

**(ದಿನಾಂಕಃ -08-2026 ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿತನಿಗೆ ಒದಿ ಹೇಳಿ ಆತ ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತು)**

-08-2026

**ಕಲಘಟಗಿ** **ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದ.ಗಳು**

**ಕಲಘಟಗಿ.**